ವೆನು" ಎಂದು ಹೇಳುತ್ತಿದ್ದರು. ಅಂತೆಯೇ ನಾವು ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೂ ಋಷಿಋಣವನ್ನು ತೀರಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮತ್ತಷ್ಟು ಆಳವಾಗಿ ತಿಳಿಯಲು ಪ್ರಯತ್ನಿಸಬೇಕು. ಹೀಗೆ ತಿಳಿದುಕೊಳ್ಳುತ್ತಿರುವಂತೆಯೇ ಅದನ್ನು ಇತರರಿಗೆ ವಿವರಿಸಬೇಕು. ಪಡೆಯುವುದು ಕೊಡುವುದಕ್ಕಾಗಿ. ಹಾಗೆ ಕೊಡುವಾಗ ಕೀರ್ತಿ, ಯಶಸ್ಸಿನ ಆಸೆಯನ್ನು ಬದಿಗೊತ್ತಿ, "ಮತ್ತೊಂದು ಹೃದಯಕ್ಕೆ ಜ್ಞಾನ ಪ್ರವೇಶಿಸುವುದಕ್ಕೆ ನಾನೊಂದು ಮಾಧ್ಯಮ ಮಾತ್ರ " ಎಂಬ ವಿನಯಭಾವ ಇರಬೇಕು.

### ಧೀರನ ಗಾಯತ್ರಿ

ಕಠೋಪನಿಷತ್ತಿನಲ್ಲಿ ಯಮ ನಚಿಕೇತನಿಗೆ ಹೀಗೆ ಹೇಳುತ್ತಾನೆ: **ಏಳಿರಿ, ಎಚ್ಚರಗೊಳ್ಳಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ. ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ ಆ ಪಥವು ದುರ್ಗಮವೆಂದು ಜ್ಞಾನಿಗಳು ಹೇಳುತ್ತಾರೆ** (೧.೩.೧೪). ನಾವು ಜಾಗೃತರಾಗಬೇಕು, ನಾಮ ರೂಪಗಳ ಮಿಥ್ಯಾಮೋಹದ ನಿದ್ರೆಯಿಂದ ಕಣ್ಣು ಹೊಸಕಿಕೊಂಡು ಏಳಬೇಕು. ಜ್ಞಾನಿಗಳ ಬಳಿಗೆ ಹೋಗಿ ಬ್ರಾಹ್ಮೀಸ್ಥಿತಿಗೆ ಮಾರ್ಗವನ್ನು ಅರಿತುಕೊಳ್ಳಬೇಕು.

ಆ ಮಾರ್ಗ ಕತ್ತಿಯ ಅಲಗಿನಂತೆ ದಾಟಲು ಕಷ್ಟ ಆದರೆ ಜೀವನದಲ್ಲಿ ಯಾವ ಸಾಹಸಕ್ಕೂ ಕೈಹಾಕದೆ ಇದ್ದರೂ ಬಾಳು ಒಂದಲ್ಲ ಒಂದು ದಿನ ಮೃತ್ಯುವಿನ ಕೈವಶವಾಗುವುದು ಖಂಡಿತ. ಸಾವು ನಿಶ್ಚಯವಾಗಿರುವಾಗ ಸತ್ಯಕ್ಕೆ ಹೋರಾಡಿ. ಅದನ್ನು ಪಡೆಯಲು ಮಾಡಿದ ಪ್ರಯತ್ನದಲ್ಲಿ ಮರಣೋನ್ಮುಖರಾಗುವುದರಲ್ಲಿಯೂ ಒಂದು ಆನಂದವಿದೆ. **ಇಂತಹ ಧೀರನ ಗಾಯತ್ರಿಯೇ ಉಪನಿಷತ್ತಿನ ಬೋಧನೆಯ ಪಲ್ಲವಿ.**

## ವಾಲ್ಟೇರ್ ಹೇಳಿದ ಬ್ರಾಹ್ಮಣನ ಕತೆ

(ವಾಲ್ಟೇರ್ ಫ್ರಾನ್ಸ್‌ನ ಒಬ್ಬ ಪ್ರಮುಖ ತತ್ತ್ವಶಾಸ್ತ್ರಜ್ಞ)

**ಉ**ತ್ತಮ ಬ್ರಾಹ್ಮಣನೊಬ್ಬ "ನಾನು ಹುಟ್ಟದೇ ಇದ್ದಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸುತ್ತದೆ" ಎಂದ. "ಯಾಕೆ ಹಾಗೆ?" ಎಂದೆ ನಾನು. ಆತ ಉತ್ತರಿಸಿದ, "ಏಕೆಂದರೆ ನಾನು ನಲವತ್ತು ವರ್ಷದಿಂದ ಅಧ್ಯಯನ ಮಾಡುತ್ತಿರುವೆ. ಇಷ್ಟು ವರ್ಷಗಳೂ ವ್ಯರ್ಥ ಅನ್ನಿಸುತ್ತಿದೆ.... ನಾನು ಜಡವಸ್ತುವಿನಿಂದ ಮಾಡಲ್ಪಟ್ಟಿದ್ದೇನೆ ಎಂದು ನಂಬಿದ್ದೇನೆ. ಆದರೆ ಯಾವುದರಿಂದ ಆಲೋಚನೆಗಳು ಹುಟ್ಟುತ್ತವೋ ಅದೇನು ಎಂದು ನನಗೆ ತೃಪ್ತಿಕರವಾಗಿ ಇನ್ನೂ ತಿಳಿಯಲಾಗಿಲ್ಲ. ಆಹಾರ ಅರಗುವ ತರಹ ನನ್ನ ಅರಿವೂ ಒಂದು ಸರಳವಾದ ಕ್ರಿಯೆಯಾಗಿ ನಡೆಯುತ್ತಿದೆಯೇ ಎಂಬುದರ ಬಗೆಗೂ ನಾನು ಅಜ್ಞಾನಿಯಾಗಿದ್ದೇನೆ. ಅಥವಾ ನನ್ನ ಕೈಯಲ್ಲಿ ವಸ್ತುವೊಂದನ್ನು ಹಿಡಿದುಕೊಳ್ಳುವ ರೀತಿಯಲ್ಲೇ ನನ್ನ ತಲೆಯಲ್ಲಿಯೂ ಆಲೋಚಿಸುತ್ತಿದ್ದೇನೆಯೋ ಎಂದೂ ತಿಳಿಯಲಾರೆ... ನಾನು ವಿಪರೀತ ಮಾತನಾಡುತ್ತೇನೆ; ಅನಂತರ ಮಾತು ಮುಗಿಸಿದ ಮೇಲೆ ನನಗೇ ಗಲಿಬಿಲಿಯಾಗಿ, ನಾನು ಹೇಳಿದ್ದರ ಬಗೆಗೆ ನಾನೇ ನಾಚಿಕೆ ಪಡುತ್ತಿರುತ್ತೇನೆ!"

**ವಾಲ್ಟೇರ್ ಅನಂತರ ತಾನು ಆ ಬ್ರಾಹ್ಮಣನ ಪಕ್ಕದ ಮನೆಯ ಅಜ್ಜಿಯ ಜತೆ ಮಾತನಾಡಿದುದನ್ನು ಹೇಳುತ್ತಾನೆ :**

"ನಿನ್ನ ಆತ್ಮ ಯಾವುದರಿಂದ ಆಗಿದೆ ಎಂದು ತಿಳಿಯದೆ ಇರುವುದರಿಂದ ಬೇಸರಪಡುತ್ತಿದ್ದೀಯಾ?" ಎಂದು ಅಜ್ಜಿಗೆ ಕೇಳಿದೆ. ಅವಳಿಗೆ ನನ್ನ ಪ್ರಶ್ನೆಯೇ ಅರ್ಥವಾಗಲಿಲ್ಲ. ತನ್ನ ಸುದೀರ್ಘ ಜೀವನದಲ್ಲಿ ಆಕೆ ಒಂದು ಕ್ಷಣವೂ ಕೂಡ ತನ್ನ ನೆರೆಮನೆಯ ಬ್ರಾಹ್ಮಣ ತುಂಬ ಚಿಂತೆಗೀಡಾದ ಈ ವಿಷಯಗಳ ಬಗ್ಗೆ ಯೋಚಿಸಿದವಳಲ್ಲ. ತನ್ನ ಹೃದಯದಾಳದಲ್ಲಿ ದೇವರ ವಿವಿಧ ಅವತಾರಗಳ ಬಗ್ಗೆ ಗಾಢವಾದ ನಂಬಿಕೆ ಇದ್ದ ಅವಳು, ಶುದ್ಧಿಗಾಗಿ ಗಂಗಾಜಲ ಸಿಕ್ಕುವಂತಿದ್ದರೆ ತಾನು ಅತ್ಯಂತ ಸುಖಿ ಎಂದು ಭಾವಿಸುವವಳು.

ಈಕೆಯ ಆನಂದದಿಂದ ವಿಚಲಿತನಾಗಿ, ನನ್ನ ತತ್ತ್ವಜ್ಞಾನಿಯ ಬಳಿಗೆ ಹೋಗಿ ಹೀಗೆಂದೆ: "ನಿನ್ನ ಮನೆಯ ಪಕ್ಕದಲ್ಲೆ ಏನೇನೂ ಯೋಚನೆ ಮಾಡದ ಒಬ್ಬಳು ಮುದುಕಿ ಅತ್ಯಂತ ಸಂತೃಪ್ತಿಯಿಂದ ಬದುಕುತ್ತಿರುವಾಗ, ನೀನು ಇಷ್ಟೊಂದು ಸಂಕಟದಲ್ಲಿರುವುದಕ್ಕೆ ನಾಚಿಕೆಯಾಗುವುದಿಲ್ಲವೆ?"

ಅದಕ್ಕೆ ಆತ ಉತ್ತರಿಸಿದ : "ನೀನೆಂದದ್ದು ಸರಿ. ನನ್ನ ಪಕ್ಕದ ಮನೆಯ ಅಜ್ಜಿಯಂತೆ ಅಜ್ಞಾನಿಯಾಗಿ ಸುಖಿಯಾಗಿರಬೇಕು ಎಂದು ನನಗೇ ನಾನು ಅನೇಕ ಸಲ ಅಂದುಕೊಂಡಿದ್ದೇನೆ. ಆದಾಗ್ಯೂ ಈ ಸಂಕಟವೇ ವಾಸಿ; ಅಂತಹ ಸುಖವನ್ನು ನಾನು ಬಯಸುವುದಿಲ್ಲ." ವಾಲ್ಟೇರ್ ಕತೆ ಮುಗಿಸುತ್ತ ಹೀಗೆನ್ನುತ್ತಾನೆ : **ಬ್ರಾಹ್ಮಣನ ಈ ಉತ್ತರ ನನ್ನ ಅನುಭವಗಳಲ್ಲೆಲ್ಲ ಅತ್ಯಂತ ಪ್ರಭಾವ ಬೀರಿದ ಅನುಭವ.**

**(ಸಂಗ್ರಹ: *ಡಾ. ಎಚ್. ಪಾಂಡುರಂಗ ವಿಠಲ*)**